ಆ) ಇಲ್ಲ

ಇ) ವಿಶ್ವಬ್ಯಾಂಕಿನಿಂದ ಹಣದ ಸಹಾಯ ಪಡೆದು ಹೂಳೆತ್ತುವ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಪ್ರಪಂಚ ಬ್ಯಾಂಕಿನಿಂದ ರೇಷ್ಮೆ ಅಭಿವೃದ್ಧಿಗೆ ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆ

359. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):– ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೇಷ್ಮೆ ಅಭಿವೃದ್ಧಿಗೆ ವಿಶ್ವ ಬ್ಯಾಂಕಿನಿಂದ ಬಂದಿರುವ ಹಣವೆಷ್ಟು?

ಆ) ಆ ಹಣದಿಂದ ಕೈಗೊಳ್ಳಬೇಕೆಂದಿರುವ ಅಭಿವೃದ್ಧಿ ಕಾರ್ಯಗಳ ವಿವರಗಳೇನು?

ಇ) ಅದರಲ್ಲಿ ರೇಷ್ಮೆ ಬೆಳೆಯನ್ನೇ ನಂಬಿರುವ ಕೋಲಾರ ಜಿಲ್ಲೆಯಲ್ಲಿ ಕೈಗೊಳ್ಳಬೇಕೆಂದಿರುವ ಕಾರ್ಯಕ್ರಮಗಳೆಷ್ಟು?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು):–

ಅ) ಕರ್ನಾಟಕ ರೇಷ್ಮೆ ಯೋಜನೆ ಮೊದಲ ಹಂತವನ್ನು ಕಾರ್ಯಗತಗೊಳಿಸಲು 53.947 ಮಿಲಿಯನ್ ಯು.ಎಸ್. ಡಾಲರ್ಸ್ (ರೂ. 53.947 ಕೋಟಿ) ನೆರವು ಬಂದಿದೆ, ಎರಡನೆ ಹಂತವನ್ನು ಕಾರ್ಯಗತಗೊಳಿಸಲು ಇದುವರೆವಿಗೂ ವಿಶ್ವಬ್ಯಾಂಕಿನಿಂದ ಹಣ ಬಂದಿರುವುದಿಲ್ಲ.

ಆ) ರಾಷ್ಟ್ರೀಯ ರೇಷ್ಮೆ ಯೋಜನೆ (ಕರ್ನಾಟಕ) ಎರಡನೇ ಹಂತ.

1. ಪಿ2 ಕೃಷಿ ಕ್ಷೇತ್ರಗಳ ಬಲಪಡಿಸುವಿಕೆ 16
2. 8 ಪಿ2 ಮತ್ತು ಪಿ1 ಬಿತ್ತನೆ ಕೋಠಿಗಳ ಸ್ಥಾಪನೆ.
3. 50 ಚಾಕಿ ಸಾಕಾಣಿಕೆ ಕೇಂದ್ರಗಳು (ಬಿತ್ತನೆ ವಲಯ)
4. ತಾಂತ್ರಿಕ ಸೇವಾ ಕೇಂದ್ರಗಳು 96
5. 17 ತಾಂತ್ರಿಕ ಸೇವಾ ಕೇಂದ್ರಗಳು (ರೇಷ್ಮೆ ನೂಲು ಬಿಚ್ಚಾಣಿಕೆ)
6. ತರಬೇತಿ ಶಾಲೆಗಳ ಬಲಪಡಿಸುವಿಕೆ 4
7. ಹೊಸ ತರಬೇತಿ ಶಾಲೆಗಳು 2
8. ರೇಷ್ಮೆ ಗೂಡು ಮಾರುಕಟ್ಟೆಗಳ ಬಲಪಡಿಸುವಿಕೆ 6.
9. ಬಿತ್ತನೆ ವಲಯದ ರೇಷ್ಮೆ ಗೂಡು ಮಾರುಕಟ್ಟೆಗಳು 2.
10. ಖುಷ್ಕಿ ಜಮೀನು ಮೃಮಸಾಯ 370 ಹೆಕ್ಟೇರ್
11. ಚಾಕಿ ಸಾಕಾಣಿಕೆ ಕೇಂದ್ರಗಳ ಪಾಸಗೀಕರಣ 1316
12. ರೇಷ್ಮೆ ಅಭಿವೃದ್ಧಿ ಯೋಜನೆ – 1ರಲ್ಲಿ ಸ್ಥಾಪಿತಗೊಂಡ ರೇಷ್ಮೆ ಬಿತ್ತನೆ ಕೋಠಿಗಳಿಗೆ ನಿರ್ವಹಣಾ ವೆಚ್ಚ.
13. ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ಸಂಸ್ಥೆ

ಅ) ಅನ್ ಫಾರ್ಮ್ ಕ್ರೆಡಿಟ್

1. ಹಿಪ್ಪು ನೇರಳೆ ನಾಟಿಗಾಗಿ ಸಾಲ ಸೌಲಭ್ಯ

2. ರೇಷ್ಮೆ ಹುಳು ಸಾಕಣೆ ಸಲಕರಣೆಗಳಿಗಾಗಿ ಸಾಲ ಸೌಲಭ್ಯ

3. ರೇಷ್ಮೆ ಹುಳು ಸಾಕಣೆ, ಮನೆ ಕಟ್ಟಿಸಲು ಸಾಲ ಸೌಲಭ್ಯ

4. ನೀರಾವರಿ ಬಾವಿ ತೋಡಿಸಲು ಸಾಲ ಸೌಲಭ್ಯ

ಆ) ಸಂಸ್ಕರಣ ಸಾಲ ನೀಡುವ ಯೋಜನೆ

5. ಖಾಸಗಿ ಬಿತ್ತನೆ ಕೋಠಿಗಳಿಗೆ ಸಹಾಯ ಧನ

6. ಸುಧಾರಿತ ಚರಕಗಳನ್ನು ಅಳವಡಿಸಲು ಸಾಲ ಸೌಲಭ್ಯ

7. ಕಾಟೇಜ್ ಬೇಸಿನ್‌ಗಳನ್ನು ಅಳವಡಿಸಲು ಸಾಲ ಸೌಲಭ್ಯ

ಇ) ಐ.ಡಿ.ಬಿ.ಐ.

8. ರೇಷ್ಮೆ ಹುರಿ ಮಾಡುವ ಘಟಕಗಳನ್ನು ಅಳವಡಿಸಲು ಸಾಲ ಸೌಲಭ್ಯ

9. ಕೈಮಗ್ಗಗಳನ್ನು ಅಳವಡಿಸಲು ಸಾಲ ಸೌಲಭ್ಯ

10. ವಿದ್ಯುತ್ ಚಾಲಿತ ಮಗ್ಗಗಳನ್ನು ಅಳವಡಿಸಲು ಸಾಲ ಸೌಲಭ್ಯ

ಇ) 1. ಯೋಜನೆಯ ಅವಧಿಯಲ್ಲಿ 1600 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ನಾಟಿ ಮಾಡಿಸಲು ಉದ್ದೇಶಿಸಲಾಗಿದೆ.

2. ಖುಷ್ಕಿ ಜಮೀನು ವ್ಯವಸಾಯ ಯೋಜನೆಯಡಿಯಲ್ಲಿ ಚಿತ್ರಾವತಿ ಜಲಾನಯನ ಪ್ರದೇಶದಲ್ಲಿ 100 ಹೆಕ್ಟೇರ್ ಹಿಪ್ಪುನೇರಳೆ ಮರಗಳನ್ನು ಬೆಳೆಸಲು ಉದ್ದೇಶಿಸಲಾಗಿದೆ.

3. 13 ತಾಂತ್ರಿಕ ಸೇವಾ ಕೇಂದ್ರಗಳ ಸ್ಥಾಪನೆಗಳ ಜೊತೆಗೆ ಹೊಸದಾಗಿ 13 ತಾಂತ್ರಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

4. 3 ರೇಷ್ಮೆ ನೂಲು ಬಿಚ್ಚುವ ತಾಂತ್ರಿಕ ಸೇವಾ ಕೇಂದ್ರಗಳ ಸ್ಥಾಪನೆ.

5. ಚಿಂತಾಮಣಿಯಲ್ಲಿ 2 ಮಾರುಕಟ್ಟೆ ಕಟ್ಟಡವನ್ನು ಹಾಗೂ ಶಿಡ್ಲಘಟ್ಟದಲ್ಲಿ ಒಂದು ಹೆಚ್ಚುವರಿ ಕಟ್ಟಡಗಳ ನಿರ್ಮಾಣ.

6. ಬಿಪ್ಪನಹಳ್ಳಿಯಲ್ಲಿ ಹಾಲಿ ಇರುವ ಒಂದು ರೇಷ್ಮೆ ಕೃಷಿ ಕ್ಷೇತ್ರವನ್ನು ಪಿ2 ಮೂಲ ಬಿತ್ತನೆ ಕ್ಷೇತ್ರವನ್ನಾಗಿ ಅಭಿವೃದ್ಧಿ ಪಡಿಸುವುದು.

7. 346 ಖಾಸಗೀಕರಣವಾಗುವ ಚಾಕಿ ಕೇಂದ್ರಗಳಿಗೆ ಕೆಲವು ನಿಬಂಧನೆಗಳಿಗೆ ಒಳಪಟ್ಟು ಆರ್ಥಿಕ ನೆರವು ನೀಡಲಾಗುವುದು.

<u>ಸಾಲ:</u>

ಅ) ಈ ಕೆಳಗಿನ ಕಾರ್ಯಕ್ರಮಗಳಿಗೆ ರಾಷ್ಟ್ರೀಕೃತ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕುಗಳು ಹಾಗೂ ಕಾಸ್ಕಾರ್ಡ್ ಬ್ಯಾಂಕುಗಳ ಮೂಲಕ ಸಾಲ ಕೊಡಲಾಗುವುದು.

1. ಹಿಪ್ಪುನೇರಳೆ ನಾಟಿ ಮಾಡಲು

2. ರೇಷ್ಮೆ ಹುಳು ಸಾಕಣೆ ಸಲಕರಣೆಗಳನ್ನು ಕೊಳ್ಳಲು

3. ರೇಷ್ಮೆ ಹುಳು ಸಾಕುವ ಮನೆಗಳಿಗೆ

4. ನೀರಾವರಿ ಕಲ್ಪಿಸಲು ಬಾವಿ, ಬೋರ್‌ವೆಲ್ ತೋಡುವ ಸಲುವಾಗಿ.

ಸಿದ್ದೇಪಲ್ಲಿ ಕ್ರಾಸ್ ಹಾಲು ಉತ್ಪಾದಕರ ಸಹಕಾರ ಸಂಘದ ವ್ಯಾಪ್ತಿಗೆ ಬರುವ ಗ್ರಾಮಗಳ ಬಗ್ಗೆ

408. ಶ್ರೀ ಚೌಡಾರೆಡ್ಡಿ (ಚಿಂತಾಮಣಿ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿದ್ದೇಪಲ್ಲಿ ಕ್ರಾಸ್ ಹಾಲು ಉತ್ಪಾದಕರ ಸಹಕಾರ ಸಂಘ ಸಿದ್ದೇಪಲ್ಲಿ ಕ್ರಾಸ್ ಇದರ ಕಾರ್ಯವ್ಯಾಪ್ತಿಗೆ ಬರುವ ಗ್ರಾಮಗಳ ಹೆಸರು ಮತ್ತು ಆಯಾ ಗ್ರಾಮಗಳಲ್ಲಿರುವ ಷೇರುದಾರರ ಹೆಸರುಗಳನ್ನು ನೀಡುವುದು?

ಆ) ಈ ಹಾಲು ಉತ್ಪಾದಕರ ಸಹಕಾರ ಸಂಘ ಒಂದು ಸ್ವಂತ ಕಟ್ಟಡದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಈ ರೀತಿ ಸಹಕಾರ ಸಂಘಗಳು ಸ್ವಂತ ಕಟ್ಟಡದಲ್ಲಿರಬಾರದೆಂಬ ನಿಯಮವೇನಾದರೂ ಇದೆಯೇ? ಮತ್ತು ಎಷ್ಟು ವರ್ಷಗಳಿಂದ ಸಂಘದ ಮಹಿವಾಟನ್ನು ನಡೆಸಿಕೊಂಡು ಬರುತ್ತಿದ್ದಾರೆ?

ಇ) ಖಾಸಗಿ ಕಟ್ಟಡದಲ್ಲಿ ಇಟ್ಟುಕೊಂಡು ಸದರಿ ಕಾರ್ಯವ್ಯಾಪ್ತಿ ಗ್ರಾಮಗಳ ಹಾಲು ಉತ್ಪಾದಕರಿಗೆ ಸದಸ್ಯತ್ವವನ್ನು ನಿರಾಕರಿಸಿ ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಪಶುಸಂಗೋಪನಾ ಸಚಿವರು):–

ಅ) ಈ ಕೆಳಕಂಡ ಗ್ರಾಮಗಳು ಈ ಸಂಘದ ಕಾರ್ಯವ್ಯಾಪ್ತಿಯಲ್ಲಿರುತ್ತವೆ.

1. ಸಿದ್ದೇಪಲ್ಲಿ
2. ಕನಿಶೆಟ್ಟಿಹಳ್ಳಿ
3. ಕಾಪ್ರಳ್ಳಿ
4. ಅಡೇಹಳ್ಳಿ
5. ಭೂಮಿಶೆಟ್ಟಿಹಳ್ಳಿ
6. ಗೋಪಾಲಪುರ
7. ಸೋಮಯಾಜಲಹಳ್ಳಿ

ಷೇರುದಾರರ ಹೆಸರುಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ಖಾಸಗಿ ಕಟ್ಟಡವನ್ನು ಬಾಡಿಗೆಗೆ ಪಡೆದು ಸಂಘವನ್ನು ನಡೆಸಲಾಗುತ್ತಿದೆ. ಸಂಘ ಸ್ವಂತ ಕಟ್ಟಡದಲ್ಲಿರಬಾರದೆಂಬ ನಿಯಮವೇನೂ ಇರುವುದಿಲ್ಲ. ಕಳೆದ 4 ವರ್ಷಗಳಿಂದ ಸಂಘದ ಮಹಿವಾಟನ್ನು ನಡೆಸಿಕೊಂಡು ಬರುತ್ತಿದ್ದಾರೆ.